11	ಚಿತ್ರದುರ್ಗ	290.00	290.00	290.00
12	ದಕ್ಷಿಣ ಕನ್ನಡ	167.20	167.20	167.20
13	ದಾವಣಗೆರೆ	266.00	266.00	266.00
14	ಧಾರವಾಡ	226.00	226.00	226.00
15	ಗದಗ	213.00	213.00	213.00
16	ಗುಲ್ಬರ್ಗಾ	600.00	600.00	15.00
17	ಹಾಸನ	340.00	340.00	340.00
18	ಹಾವೇರಿ	336.00	336.00	336.00
19	ಕೊಡಗು	114.00	114.00	1185.00
20	ಕೋಲಾರ	243.00	243.00	243.00
21	ಕೊಪ್ಪಳ	238.00	238.00	238.00
22	ಮಂಡ್ಯ	320.00	320.00	319.99
23	ಮೈಸೂರು	312.00	312.00	312.00
24	ರಾಮನಗರ	162.00	162.00	162.00
25	ರಾಯಚೂರು	308.00	308.00	0.00
26	ಶಿವಮೊಗ್ಗ	273.59	273.59	943.49
27	ತುಮಕೂರು	507.00	507.00	507.00
28	ಉಡುಪಿ	109.00	109.00	109.00
29	ಉತ್ತರ ಕನ್ನಡ	490.0	490.00	0.00
	Lumpsum	6600.81	6600.81	0
		14827.70	**14827.70**	**8567.75**

ಬೆಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಇರುವ ಕಾಲೇಜುಗಳು

780 (784) ಶ್ರೀ ನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮೀ ಲೇಔಟ್) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಎಷ್ಟು ಕಾಲೇಜುಗಳು ಇವೆ, ಅವುಗಳಲ್ಲಿ ಸರ್ಕಾರಿ/ ಖಾಸಗಿ ಕಾಲೇಜುಗಳು ಎಷ್ಟು; (ವಿವರವಾದ ಮಾಹಿತಿ ಒದಗಿಸುವುದು);

ಆ) ವಿವಿಧ ತರಗತಿಗಳಿಗೆ ಕಾಲೇಜುಗಳಲ್ಲಿ ನಿಗದಿಪಡಿಸಿರುವ ಪ್ರವೇಶ ಶುಲ್ಕ, ಅಭಿವೃದ್ಧಿ ಶುಲ್ಕ ಮತ್ತು ತಿಂಗಳ ಶುಲ್ಕಗಳ ವಿವರ ನೀಡುವುದು;

ಇ) ಕಾನೂನು ಬಾಹಿರವಾಗಿ ವಿದ್ಯಾರ್ಥಿಗಳಿಂದ ಖಾಸಗಿ ಕಾಲೇಜುಗಳು ಪಡೆಯುತ್ತಿರುವ ಅಭಿವೃದ್ಧಿ ಶುಲ್ಕದ ಬಗ್ಗೆ ತನಿಖೆ ನಡೆಸಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ: ಇದುವರೆವಿಗೂ ಎಷ್ಟು ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ;

ಈ) ಇದರಲ್ಲಿ ಅನುದಾನಿತ ಕಾಲೇಜುಗಳೆಷ್ಟು; (ಕಾಲೇಜಿನ ಹೆಸರು ತಿಳಿಸುವುದು);

ಉ) ಅನುದಾನಿತ/ಖಾಸಗಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು; ಸರ್ಕಾರದಿಂದ ಎಷ್ಟು ಅನುದಾನ ಬಿಡುಗಡೆ ಮಾಡಲಾಗುತ್ತಿದೆ; (ವಿವರವಾದ ಮಾಹಿತಿ ನೀಡುವುದು);

ಊ) ಹಾಗಿದ್ದಲ್ಲಿ, ಖರ್ಚಾಗುತ್ತಿರುವ ಹಣವೆಷ್ಟು; ಮತ್ತು ವಿದ್ಯಾರ್ಥಿಗಳಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯವೆಷ್ಟು; (ಕಾಲೇಜುವಾರು ವಿವರ ಒದಗಿಸುವುದು)?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಒಟ್ಟು 665 ಕಾಲೇಜುಗಳು ಸಂಯೋಜನೆ ಹೊಂದಿರುತ್ತವೆ. ಇವುಗಳಲ್ಲಿ 53 ಸರ್ಕಾರಿ ಕಾಲೇಜುಗಳು ಮತ್ತು ಉಳಿದ 612 ಖಾಸಗೀ ಕಾಲೇಜುಗಳಾಗಿರುತ್ತವೆ.

ಆ)

1) ವಿವಿಧ ಪದವಿ ತರಗತಿಗಳಿಗೆ ಈ ಕಾಲೇಜುಗಳಲ್ಲಿ ನಿಗಧಿಪಡಿಸಿರುವ ಪ್ರವೇಶ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ದಿನಾಂಕ: 10-6-2009ರ ಬೆಂಗಳೂರು ವಿಶ್ವವಿದ್ಯಾಲಯದ ಅಧಿಸೂಚನೆಯಲ್ಲಿ ನಿಗಧಿಪಡಿಸಲಾಗಿದೆ.

2) ವಿವಿಧ ಸ್ನಾತಕೋತ್ತರ ಕೋರ್ಸುಗಳಿಗೆ ಕಾಲೇಜುಗಳ ನಿಗಧಿಪಡಿಸಿರುವ ಪ್ರವೇಶ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ದಿನಾಂಕ: 26-08-2009 ಮತ್ತು 09-09-2009ರ ಬೆಂಗಳೂರು ವಿಶ್ವವಿದ್ಯಾಲಯದ ಅಧಿಸೂಚನೆಯಲ್ಲಿ ನಿಗಧಿಪಡಿಸಲಾಗಿದೆ.

3) ಕಾಲೇಜುಗಳು ವಸೂಲಾತಿ ಮಾಡುತ್ತಿರುವ ಅಭಿವೃದ್ಧಿ ಶುಲ್ಕ ಮತ್ತು ತಿಂಗಳ ಶುಲ್ಕಗಳ ಬಗ್ಗೆ ಮಾಹಿತಿ ಇರುವುದಿಲ್ಲ.

ಇ) ಕಾನೂನು ಬಾಹಿರವಾಗಿ ವಿದ್ಯಾರ್ಥಿಗಳಿಂದ ಖಾಸಗಿ ಕಾಲೇಜುಗಳು ಪಡೆಯುತ್ತಿರುವ ಅಭಿವೃದ್ಧಿ ಶುಲ್ಕದ ಬಗ್ಗೆ ತನಿಖೆ ನಡೆಸಲು ಸರ್ಕಾರವು ಯಾವುದೇ ಕ್ರಮವನ್ನು ಜರುಗಿಸಿರುವುದಿಲ್ಲ. ಮತ್ತು ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ಈ) ಉ) ಮತ್ತು ಊ) ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಅನುಬಂಧ – 1

PVT. AIDED COLLEGES

Sl. No.	Name of the College
1	NATIONAL COLLEGE, BASAVANAGUDI, BANGALORE
2	VIJAYA COLLEGE, BANGALORE
3	MOUNT CARMEL COLLEGE, BANGALORE
4	MES COLLEGE, BANGALORE
5	SJR COLLEGE, BANGALORE
6	APS ARTS AND SCIENCE COLLEGE, BANGALORE
7	S NIJALINGAPPA COLLEGE, BANGALORE
8	DAYANANDA COLLEGE, BANGALORE
9	APS EVENING COLLEGE, BANGALORE
10	BMS WOMEN'S COLLEGE, BANGALORE
11	NATIONAL COLLEGE, JAYANAGARA, BANGALORE
12	JOTHINIVAS COLLEGE, BANGALORE
13	SLN COLLEGE, BANGALORE
14	VV PURAM EVENING COLLEGE, BANGALORE

15	VV PURAM SCIENCE COLLEGE, BANGALORE
16	AL-AMEEN COLLEGE, BANGALORE
17	CHRIST COLLEGE, BANGALORE
18	BES EVENING COLEGE, BANGALORE
19	SHESHADRIPURAM EVENING COLLEGE, BANGALORE
20	BES COLLGE,, BANGALORE
21	MAHARANI LAKSHMI AMMANI COLLEGE, BANGALORE
22	SAINT JOSEPH ARTS & SCIENCE COLLEGE, BANGALORE
23	SAINT JOSEPH COMMERCE COLLEGE, BANGALORE
24	SHESHDRIPURAM COLLEGE, BANGALORE
25	NMKRV COLLEGE, BANGALORE
26	HASANTH GIRLS' COLLEGE, BANGALORE
27	BNM COLLEGE, BANGALORE
28	SAINT JOSEPH EVENING COLLEGE, BANGALORE
29	ABBAS KHAN COLLEGE, BANGALORE (BBM)
30	VVS COLLEGE, BANGALORE
31	DR. AMBEDKAR COLLEGE, BANGALORE
32	BSVP COLLEGE, BANGALORE
33	PES COLEGE, BANGALORE
34	VIVEKANAND COLLGE, BANGALORE
35	BASAVESHWARA COLLEGE, BANGALORE
36	SSMRV COLLEGE, BANGALORE
37	VASAVI VIDYANIKETANA COLLEGE, BANGALORE
38	RBANMS COLLEGE, BANGALORE BBM/MCom/BCA
39	VV PURAM ARTS & COMMERCE COLLEGE, BANGALORE

40	HKES COLLEGE, BANGALORE
41	BHAGAVAN BUDHA COLLEGE, BANGALORE (BBM)
42	MLA (LA) COLLEGE, BANGALORE
43	APS COMMERCE COLEGE, BANGALORE
44	HASANTH BOY'S COLLEGE, BANGALORE
	BANGALORE RURAL DISTRICT
45	SHRI KONGADIYAPPA COLLEGE, DODDABALLAPURA
46	SHRI SIDDAGANGA COLLEGE, NELAMANGALA
	RAMNAGARAM DISTRICT
47	RURAL COLLEGE, KANAKA PURA.
48	KUVEMPU FIRST GRADE COLLEGE, CHANNAPATTANA
	CHIKBALLAPUR DISTRICT
49	AES NATINAL COLLEGE, GOURIBIDANURU
50	SMV MUNICIPAL EVENING COLLEGE, CHIKKABALLAPURA
51	NATAIONAL COLLEGE, BAGEPALLI
52	ACHARYA WOMEN'S COLLEGE GOURIBIDANUR
	KOLAR DISTRICT
53	KGF COLLEGE, KOLAR

ಅನುಬಂಧ – 2

ಅನುದಾನಿತ/ಖಾಸಗಿ ಕಾಲೇಜುಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು;
ಅನುದಾನಿತ ಕಾಲೇಜುಗಳ ವಿದ್ಯಾರ್ಥಿಗಳ ಸಂಖ್ಯೆ:

ವಿದ್ಯಾರ್ಥಿಗಳು : 22057
ವಿದ್ಯಾರ್ಥಿನಿಯರು : 26480
ಒಟ್ಟು : **48537** (ಪ್ರತಿ ಲಗತ್ತಿಸಿದೆ)

ಮಾಹೆಯಾನ ರೂ. 5,89,98,540–00 (ಐದು ಕೋಟಿ ಎಂಭತ್ತೊಂಭತ್ತು ಲಕ್ಷದ ತೊಂಭತ್ತೆಂಟು ಸಾವಿರದ ಐದುನೂರ ನಲವತ್ತು ರೂಪಾಯಿಗಳು ಮಾತ್ರ) ಪ್ರತಿ ಲಗತ್ತಿಸಿದೆ.
ಮಾಹೆಯಾನ ರೂ.5,89,98,540–00 (ಐದು ಕೋಟಿ ಎಂಭತ್ತೊಂಭತ್ತು ಲಕ್ಷದ ತೊಂಭತ್ತೆಂಟು ಸಾವಿರದ ಐದುನೂರ ನಲವತ್ತು ರೂಪಾಯಿಗಳು ಮಾತ್ರ). ವಿದ್ಯಾರ್ಥಿಗಳಿಂದ ಸರ್ಕಾರಕ್ಕೆ ಬರುತ್ತಿರುವ ವಾರ್ಷಿಕ ಆದಾಯ ರೂ. 2,42,59,903/– ಕಾಲೇಜುವಾರು ವಿವರದ ಪ್ರತಿ ಲಗತ್ತಿಸಿದೆ
ರೂ. 2.42,59,903 (ರೂ. ಎರಡು ಕೋಟಿ ನಲವತ್ತೆರಡು ಲಕ್ಷ ಐವತ್ತೊಂಬತ್ತು ಸಾವಿರದ ಒಂಬೈನೂರ ಮೂರು ಮಾತ್ರ)

ಹೊಸದಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಮಂಜೂರಾತಿ

782 (786) ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2007–08 ರಿಂದ 2010ನೇ ಸಾಲಿನಲ್ಲಿ ರಾಜ್ಯದಲ್ಲಿ ಯಾವ ಯಾವ ಸ್ಥಳಗಳಲ್ಲಿ ಹೊಸದಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲಾಗಿದೆ;

ಆ) ಹಾಗಿದ್ದಲ್ಲಿ, ಈ ಅವಧಿಯಲ್ಲಿ ಸರ್ಕಾರಕ್ಕೆ ಬಂದಿರುವ ಪ್ರಸ್ತಾವನೆಗಳು ಎಷ್ಟು; ಮಂಜೂರಾಗಿರುವ ಕಾಲೇಜುಗಳ ಜಿಲ್ಲಾವಾರು ವಿವರ ಒದಗಿಸುವುದು;

ಇ) ರಾಜ್ಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಇನ್ನೂ ಎಷ್ಟು ಪದವಿ ಪೂರ್ವ ಕಾಲೇಜುಗಳ ಅವಶ್ಯಕತೆಯಿದೆ;

ಈ) ಹಾಗಿದ್ದಲ್ಲಿ, ಕಾಲೇಜುಗಳನ್ನು ತೆರೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು (ವಿವರ ನೀಡುವುದು)?